ಮಲಯಾಳಿ ಉಚ್ಚರಣೆಯ ಸಂಸ್ಕೃತದಲ್ಲಿ ಹಾಡಲಿಕ್ಕೇ ಆರಂಭಿಸಿದರು.

ನಿಜ ಹೇಳುತ್ತೇನೆ – ಆ ಸಂದರ್ಭದಲ್ಲಿ ನನಗೆ ಅವರು ಹೇಳುತ್ತಿರುವುದೇನು ಎಂಬುದು ಏನೂ ಅರ್ಥವಾಗಿರಲಿಲ್ಲ. ಆಗ ನನಗೆ ಶಂಕರರ ಹೆಸರು ಗೊತ್ತಿತ್ತು ಬಿಟ್ಟರೆ ಇನ್ನಾವ ಪರಿಚಯವೂ ಇರಲಿಲ್ಲ; ದಕ್ಷಿಣಾಮೂರ್ತಿ ಸ್ತೋತ್ರ ನನಗೆ ಗೊತ್ತಿರಲಿಲ್ಲ; ಮುಂದಿನ ದಿನಗಳಲ್ಲಿ ನಾನು ಓದಿದ ಕಾವ್ಯಮೀಮಾಂಸೆ, ದರ್ಶನಶಾಸ್ತ್ರಗಳ ಪರಿಚಯ ಕೂಡ ನನಗೆ ಆಗ ಇರಲಿಲ್ಲ. ಈಗ ನಲವತ್ತು ವರ್ಷಗಳ ಬಳಿಕ ಅದನ್ನೆಲ್ಲ ನೆನಪಿಸಿಕೊಂಡರೆ, ಗೋಪಾಲನ್ ಅವತ್ತು ಹೇಳಲಿಕ್ಕೆ ಹೊರಟಿದ್ದ ಸಂಗತಿ ಏನು ಎಂಬುದು ಅಷ್ಟಿಷ್ಟು ಗೋಚರವಾಗುತ್ತಿದೆ. ಮತ್ತು, ಹಾಗೆ ಅರ್ಥವಾಗುವುದಕ್ಕೆ ಮೊದಲು ನಾನು ಶಂಕರರನ್ನು ಓದಬೇಕಾಯಿತು; ದಕ್ಷಿಣಾಮೂರ್ತಿ ಶ್ಲೋಕವನ್ನು ಕಿರಿಹಿಡಿದು ನೋಡಬೇಕಾಯಿತು. ಅವೆಲ್ಲ ಆಗಿದ್ದು ಈಚೆಗೆ. ಹಾಗೆ ನಾನು ಹುಡುಕಿ ಓದಿಕೊಂಡ ಆ ದಕ್ಷಿಣಾಮೂರ್ತಿಶ್ಲೋಕದ ಗೋಪಾಲನ್ ಹಾಡಿದ ಸಾಲುಗಳನ್ನೂ, ಈಗಷ್ಟೇ ಮಾಡಿದ ಅದರ ಭಾವಾನುವಾದವನ್ನೂ ನಿಮ್ಮೆದುರು ಇಡುತ್ತೇನೆ –

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ
ಯಃ ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾತ್ಮಾನಮೇವಾದ್ವಯಂ
ತಸ್ಮೈ ಶ್ರೀ ಗುರುಮೂರ್ತಯೇ ನಮ ಇದಂ ಶ್ರೀ ದಕ್ಷಿಣಾಮೂರ್ತಯೇ

ವಿಶ್ವವೆಂಬುದು ಕನ್ನಡಿಯ ಒಳಗೆ ತೋರುತಿಹ
ನಗರದೊಲು ಕಾಣುವುದು ಮನಸಿನೊಳಗೆ
ಹೊರಗಡೆಗೆ ಜರುಗುವುದು ಮಾಯೆಯಾಟದ ಎಸಕ
ನಿದ್ರೆಯೊಳು ಏಳುತಿಹ ಕನಸುಗಳ ಹಾಗೆ
ಆತ್ಮಬೋಧೆಯ ಬಳಿಕ ಒಳಬಗೆಯ ಎಚ್ಚರದಿ
ಎರಡಲ್ಲವೆಂಬ ನಿಜ ತಿಳಿಯುವುದು ನಮಗೆ
ಅಂಥ ಅರಿವನು ತರುವ ಗುರುಗಳಲಿ ಗುರುವಾತ
ದಕ್ಷಿಣಾಮೂರ್ತಿಯವ ನಮಿಸು ಅವಗೆ

ಮತ್ತೆ ಹಳೆಯ ಕಥೆಗೇ ಹೋಗೋಣ. ಅಂದು, ಈ ಕಾವ್ಯವಾಚನ ನಡೆಯುತ್ತಿರುವಾಗ, ನಾವು

